**Online at:** https://researchtrendsjournal.com
**Indexed Journal**

**ISSN No:** 2584-282X
**Peer Reviewed Journal**




**INTERNATIONAL JOURNAL OF TRENDS IN EMERGING RESEARCH AND DEVELOPMENT**

**Volume 3; Issue 4; 2025; Page No. 171-174**

**Received: 04-04-2025**
**Accepted: 13-05-2025**
**Published: 10-07-2025**

# ಕುಮಾರವ್ಯಾಸ ಚಿತ್ರಿಸಿದ ಕರ್ಣನ ಸ್ವಾಮಿ ನಿಷ್ಠೆ

**ಡಾ. ಮಂಜುನಾಥ ಎಂ ಎಂ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿ ನಗರ, ಶಿವಮೊಗ್ಗ, ಕರ್ನಾಟಕ, ಭಾರತ

**DOI:** https://doi.org/10.5281/zenodo.18115552

**Corresponding Author:** ಡಾ. ಮಂಜುನಾಥ ಎಂ ಎಂ

**Abstract**

ಹಲ್ಮಿಡಿ ಶಾಸನದಿಂದ ಆರಂಭವಾಗುವ ಕನ್ನಡ ಸಾಹಿತ್ಯ ಪರಂಪರೆ ಕ್ರಮೇಣ ಮಹಾಕಾವ್ಯ, ವಚನ ಹಾಗೂ ಭಕ್ತಿ ಸಾಹಿತ್ಯದ ಮೂಲಕ ವಿಕಸನಗೊಂಡಿದೆ. ಈ ಸಾಹಿತ್ಯ ಪ್ರವಾಹದಲ್ಲಿ ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ವಿಶೇಷ ಸ್ಥಾನವನ್ನು ಹೊಂದಿದೆ. ಪಂಪನ ನಂತರ ವ್ಯಾಸಭಾರತವನ್ನು ಸಮಗ್ರವಾಗಿ ಕನ್ನಡಕ್ಕೆ ತರುವ ಮಹತ್ವದ ಕಾರ್ಯವನ್ನು ಕುಮಾರವ್ಯಾಸ ನೆರವೇರಿಸಿದ್ದಾನೆ. ನಡುಗನ್ನಡದಲ್ಲಿ, ಭಾಮಿನಿ ಷಟ್ಪದಿ ಎಂಬ ಜಾನಪದೀಯ ಗೇಯಶೈಲಿಯನ್ನು ಬಳಸಿಕೊಂಡು ಆತ ಕಾವ್ಯವನ್ನು ಪುನರ್‌ರಚನೆಗೊಳಿಸಿದ್ದಾನೆ. ಈ ಕೃತಿಯಲ್ಲಿ ಕೃಷ್ಣ, ಭೀಷ್ಮ, ಅರ್ಜುನ ಮುಂತಾದ ಪಾತ್ರಗಳೊಂದಿಗೆ ವಿಶೇಷವಾಗಿ ಕರ್ಣನ ಸ್ವಾಮಿನಿಷ್ಠೆ, ತ್ಯಾಗ, ಸತ್ಯನಿಷ್ಠೆ ಮತ್ತು ಮಾನವೀಯ ಮೌಲ್ಯಗಳನ್ನು ಕವಿಯು ಆಳವಾಗಿ ಚಿತ್ರಿಸಿದ್ದಾನೆ. ಉದ್ಯೋಗಪರ್ವದ ಸಂದರ್ಭದಲ್ಲಿ ಕೃಷ್ಣನು ನೀಡಿದ ರಾಜ್ಯ, ಅಧಿಕಾರ ಮತ್ತು ಐಶ್ವರ್ಯದ ಆಮಿಷವನ್ನೂ ತಿರಸ್ಕರಿಸಿ ದುರ್ಯೋಧನನಿಗೆ ನಿಷ್ಠನಾಗಿ ಉಳಿಯುವ ಕರ್ಣನ ವ್ಯಕ್ತಿತ್ವವು ಕುಮಾರವ್ಯಾಸನ ಕಾವ್ಯ ಪ್ರತಿಭೆಯನ್ನು ಸ್ಪಷ್ಟವಾಗಿ ಅನಾವರಣಗೊಳಿಸುತ್ತದೆ. ಈ ಅಧ್ಯಯನವು ಕನ್ನಡ ಭಕ್ತಿ ಪರಂಪರೆಯ ಹಿನ್ನೆಲೆಯಲ್ಲಿ ಕುಮಾರವ್ಯಾಸನ ಕಾವ್ಯದಲ್ಲಿನ ಕರ್ಣನ ಸ್ವಾಮಿನಿಷ್ಠೆಯ ಮಹತ್ವವನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ.

**Keywords:** ಹಲ್ಮಿಡಿ ಶಾಸನ, ಕನ್ನಡ ಸಾಹಿತ್ಯ ಪರಂಪರೆ, ಕುಮಾರವ್ಯಾಸ, ಕರ್ಣಾಟ ಭಾರತ ಕಥಾಮಂಜರಿ, ಭಕ್ತಿ ಮಾರ್ಗ, ಭಾಮಿನಿ ಷಟ್ಪದಿ, ಕರ್ಣನ ಸ್ವಾಮಿನಿಷ್ಠೆ, ನಡುಗನ್ನಡ, ಮಹಾಕಾವ್ಯ

## Introduction

ಹಲ್ಮಿಡಿ ಶಾಸನ ಕನ್ನಡದ ಮೊದಲ ಶಿಲಾ ಶಾಸನ.ಕನ್ನಡ ಸಾಹಿತ್ಯದ ಬರಹ ರೂಪವನ್ನು ದಾಖಲಿಸಿದ ಆರಂಭದ ಗಡುವನ್ನು ಸೂಚಿಸುವ ಶಾಸನ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ.ಕನ್ನಡ ಭಾಷೆ ಸಾಹಿತ್ಯವಾಗುವ ಪ್ರಕ್ರಿಯೆಯಲ್ಲಿ ಹೇಗೆ ತೊಡಗಿಕೊಂಡಿತ್ತು ಎಂಬುದನ್ನು ನಿರ್ಧರಿಸಲು ಪ್ರಮುಖ ಆಧಾರವೇ ಈ ಹಲ್ಮಿಡಿ ಶಿಲಾ ಶಾಸನ.ಇದರ ಅಧ್ಯಯನದ ತರುವಾಯ ಕಾವ್ಯದ ದಾರಿಯ ಜಾಡನ್ನು ಗುರುತಿಸಲು ನೃಪತುಂಗ, ಅಸಗ, ಗುಣವರ್ಮ, ಗುಣನಂದಿ,ಪಂಪ,ನಾಗವರ್ಮರ ಕೃತಿಗಳನ್ನು ಹೆಸರಿಸಬಹುದು.

ಕನ್ನಡದಲ್ಲಿ ಮಹಾಕಾವ್ಯದ ಗೌರವಕ್ಕೆ ಪಾತ್ರವಾದುದು ಪಂಪನ ವಿಕ್ರಮಾರ್ಜುನ ವಿಜಯಂ(ಪಂಪ ಭಾರತ)ನಂತರದಲ್ಲಿ ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಎಂಬುದನ್ನುಒಪ್ಪಬಹುದು.ವ್ಯಾಸ ಭಾರತ ಸಂಸ್ಕೃತದಲ್ಲಿರುವ ಕೃತಿ.ಕನ್ನಡದಲ್ಲಿ ಪಂಪನು ಭಾರತ ಕಥೆಯನ್ನು ಬರೆದರೂ ಕೂಡ ಪೂರ್ಣವಾಗಿ ವ್ಯಾಸರನ್ನು ಅನುಸರಿಸದೆ ಅಲ್ಲಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡಿದ್ದರಿಂದ ಸಮಗ್ರ ವ್ಯಾಸ ಭಾರತವನ್ನು ಬಯಸುವವರಿಗೆ ಪೂರ್ಣ ಕಥೆ ಕನ್ನಡದಲ್ಲಿ ದೊರೆಯದಿದ್ದಾಗ ಅದನ್ನು ಕನ್ನಡಿಗರಿಗೆ ತಲುಪಿಸುವ ಕಾರ್ಯದಲ್ಲಿ ಕುಮಾರವ್ಯಾಸ ಮೊದಲಿಗನಾಗಿದ್ದಾನೆ.

ಹತ್ತನೆಯ ಶತಮಾನದ ಸಾಹಿತ್ಯ ಚಂಪೂ ಶೈಲಿಯಲ್ಲಿದ್ದುದರಿಂದ ಅದನ್ನು ಶ್ರೀಸಾಮಾನ್ಯರಿಗೆ ಅರ್ಥೈಸಿ ಕೊಳ್ಳಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯನ್ನು ಅರ್ಥ ಮಾಡಿಕೊಂಡ ಶಿವಶರಣರು ಹನ್ನೆರಡನೆಯ ಶತಮಾನದಲ್ಲಿ ವಚನ ಸಾಹಿತ್ಯವನ್ನು ಸೃಜಿಸಿ ಅದರ ಮೂಲಕ ಸಮಾಜವನ್ನು ತಿದ್ದುವ ಪ್ರಯತ್ನ

ಮಾಡಿದರು.ಜನ ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ವಚನ ಸಾಹಿತ್ಯ ಎಲ್ಲರಿಗೂ ಪ್ರಿಯವಾಯಿತು.ವಚನ ಸಾಹಿತ್ಯದ ಪ್ರಧಾನ ಅಂಶಗಳಲ್ಲಿ ಭಕ್ತಿ ಮಾರ್ಗವೂ ಒಂದು.ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಪ್ರಬಲವಾದ ಭಕ್ತಿ ಚಳವಳಿ ಮಧ್ವಾಚಾರ್ಯ,ರಾಮಾನುಜಾಚಾರ್ಯ, ಶಂಕರಾಚಾರ್ಯರಿಂದಾಗಿ ಕರ್ನಾಟಕದಲ್ಲಿ ಒಂದು ಆಂದೋಲನವಾಗಿ ಹುಟ್ಟಿಕೊಂಡು ನಾಡಿನಾದ್ಯಂತ ಹರಡಿತು.ಭಕ್ತಿ ಪಂಥದ ಮಹಿಮೆಯನ್ನು ಸಾರಲು ತಾವು ಕಂಡ ದೈವದ ಶಕ್ತಿಯನ್ನು ಬೇರೆಯವರಿಗೆ ತಿಳಿಸಲು ದಾಸರುಗಳು ಕೀರ್ತನ ಸಾಹಿತ್ಯವನ್ನು ಕಂಡುಕೊಂಡರು.ಕನ್ನಡ ಸಾಹಿತ್ಯದ ಅತ್ಯಂತ ಪ್ರಬಲವಾದ ಭಕ್ತಿ ಪಂಥದ ಹಿನ್ನೆಲೆಯಲ್ಲಿ ಪುನಃ ಹೊಸ ಬಗೆಯ ಆಂದೋಲನಕ್ಕೆ ತನ್ನನ್ನು ಒಡ್ಡಿಕೊಂಡಿತು.ಇದರ ಪರಿಣಾಮ ಕನ್ನಡದಲ್ಲಿ ಭಕ್ತಿ ಪಂಥಕ್ಕೆ ಸಂಬಂಧಿಸಿದ ಹಾಗೆ ಉತ್ಕೃಷ್ಟ ಸಾಹಿತ್ಯದ ನಿರ್ಮಿತಿ ಸಾಧ್ಯವಾಯಿತು. ಕುಮಾರವ್ಯಾಸ ಈ ಭಕ್ತಿ ಮಾರ್ಗದ ಮೂಲಕ ಸಮಗ್ರ ಭಾರತವನ್ನು ಕನ್ನಡಕ್ಕೆ ತರುವ ಕಾಯಕದಲ್ಲಿ ಯಶಸ್ವಿಯಾಗಿದ್ದಾನೆ. ಸಮಗ್ರ ಭಾರತವನ್ನು ಜಾನಪದೀಯ ಗೇಯತೆಯುಳ್ಳ ಭಾಮಿನಿ ಷಟ್ಪದಿಯಲ್ಲಿ ನಡುಗನ್ನಡ ಭಾಷೆಯಲ್ಲಿ ಅನುವಾದಿಸುವುದರ ಜೊತೆಗೆ ಪುನರ್ ರಚನೆ ಮಾಡಿದ್ದಾನೆ.

ಕನ್ನಡಿಗರ ಮನೆ ಮನಗಳಲ್ಲಿ ಸದಾ ನೆನಪಿನಲ್ಲಿರುವ ಶ್ರೇಷ್ಠ ಕವಿಗಳಲ್ಲಿ ಕುಮಾರವ್ಯಾಸನೂ ಒಬ್ಬ.ಈತನ ನಿಜ ನಾಮಧೇಯ ಗದುಗಿನ ನಾರಣಪ್ಪ. ಹದಿನೈದನೆಯ ಶತಮಾನದಲ್ಲಿದ್ದ ಈತ ಗದುಗಿನ ಸಮೀಪದ ಕೋಳಿವಾಡ ಗ್ರಾಮದವನು.ಗದುಗಿನ ವೀರ ನಾರಾಯಣ ಇಷ್ಟ ದೈವ.ಈತನ ಕೃತಿಯು ಗದುಗಿನ ಭಾರತ, ಕುಮಾರವ್ಯಾಸ ಭಾರತ,ಕನ್ನಡ ಭಾರತ, ದಶಪರ್ವಗಳ ಕಥೆ,ಕೃಷ್ಣ ಕಥೆ ಎಂಬ ಹಲವು ಹೆಸರುಗಳಿಂದ ಕರೆಯಲ್ಪಟ್ಟಿದೆ.ಜಲಧಾರೆ ಯಂತೆ ಧುಮ್ಮಿಕ್ಕುವ ನುಡಿ ಗಡಣ,ಉಕ್ಕುವ ರಸಾವೇಶ,ಬೆರಗುಗೊಳಿಸುವ ಕಲ್ಪಕಥೆಗಳಿಂದ ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂಬ ಬಿರುದಿಗೆ ಪಾತ್ರನಾಗಿದ್ದಾನೆ.

ಆದಿಪರ್ವದಿಂದ ಗದಾ ಪರ್ವದವರೆಗೆ ವಿಸ್ತಾರವಾದ ಹರವುಳ್ಳದ್ದು ಈ ಕರ್ಣಾಟ ಭಾರತ ಕಥಾಮಂಜರಿ.ವೀರನಾರಾಯಣನೆ ಕವಿ,ಲಿಪಿಕಾರ ಕುವರ ವ್ಯಾಸ ಎಂದು ಕವಿತ್ವವನ್ನು ತನ್ನ ಪ್ರೀತಿಯ ದೇವರಿಗೆ ಅರ್ಪಿಸಿದ್ದಾನೆ.ಹಲಗೆ ಬಳಪ ಹಿಡಿಯದೆ ಪದವಿಟ್ಟು ಅಳಿಸದೆ ಈ ಕಾವ್ಯ ರಚಿಸಿದ್ದೇನೆಂದು ಹೇಳಿಕೊಂಡಿದ್ದಾನೆ.ಚಿತ್ರಿಸಿದ ಒಂದೊಂದು ಪಾತ್ರವೂ ಕುಮಾರವ್ಯಾಸನ ಪ್ರತಿಭಾ ವಿಲಾಸದಲ್ಲಿ ಜೀವಂತಿಕೆಯನ್ನು ಪಡೆದು ಜನ ಮಾನಸದಲ್ಲಿ ಶಾಶ್ವತವಾಗಿ ನಿಲ್ಲುತ್ತವೆ.

ಕೃಷ್ಣ, ಭೀಷ್ಮ, ದ್ರೋಣ,ಧರ್ಮರಾಯ,, ಭೀಮ,ಅರ್ಜುನ, ಕರ್ಣ, ದುರ್ಯೋಧನ, ಶಲ್ಯ ಮುಂತಾದ ಪಾತ್ರಗಳನ್ನು ಅದ್ಭುತವಾಗಿ ಚಿತ್ರಿಸಿದ್ದಾನೆ.ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಪರಿಚಯಿಸುವ ಪರಿಯನ್ನು ಕಂಡು ಕುವೆಂಪುರವರು

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದಾಪರವಾಗುವುದು,ಭಾರತ ಕಣ್ಣಲಿ ಕುಣಿಯುವುದು
ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು......ಎಂದು ಹೊಗಳಿದ್ದಾರೆ.

ಉದ್ಯೋಗ ಪರ್ವದ ಹಿನ್ನೆಲೆಯಲ್ಲಿ ಕುಮಾರವ್ಯಾಸ ಚಿತ್ರಿಸಿದ ಕರ್ಣನ ಸ್ವಾಮಿ ನಿಷ್ಠೆ:

ಕೃಷ್ಣನು ಪಾಂಡವರನ್ನು ಮತ್ತು ಕೌರವರನ್ನು ಯುದ್ಧದಿಂದ ಮುಕ್ತಗೊಳಿಸಲು ತೀರ್ಮಾನಿಸಿ ದೂತನಾಗಿ ಕೌರವನ ಆಸ್ಥಾನಕ್ಕೆ ಬಂದು ಪಾಂಡವರಿಗೆ ಅರ್ಧರಾಜ್ಯ,ಕೊನೆಗೆ ಐದು ಕುಗ್ರಾಮಗಳನ್ನಾದರೂ ನೀಡು ಎಂದಾಗ ದುರ್ಯೋಧನ ಅದಕ್ಕೆ ಒಪ್ಪದೇ ಇದ್ದಾಗ ಕೃಷ್ಣ ಬರಿಗೈಲಿ ಹಿಂದಿರುಗಬೇಕಾಗುತ್ತದೆ.

ಕೌರವನ ಆಸ್ಥಾನದಿಂದ ಹೊರಬರುವಾಗ ಯುದ್ಧಕ್ಕೆ ಸಿದ್ಧವಾಗಲು ಹೇಳಿ ಬರುತ್ತಾನೆ,ಬರುವಾಗ ಕರ್ಣನನ್ನು ಎದುರುಗೊಂಡು ಸ್ವಲ್ಪ ದೂರದವರೆಗೆ ಕಳುಹಿಸಲು ಬಾರೆಂದು ಕರೆಯುತ್ತಾನೆ. ಕೃಷ್ಣನು ಕರ್ಣನನ್ನು ರಥದಲ್ಲಿ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡನು.ಕರ್ಣನು ಸಂಕೋಚದಿಂದ ನಿನಗೆ ನಾನು ಸಮಾನನೇ ಎಂದಾಗ ಕೃಷ್ಣನು ಕೌರವ ಯಾದವರಲ್ಲಿ ನನಗೆ ಭೇದವಿಲ್ಲ ಎನ್ನುತ್ತಾನೆ,ಅದಕ್ಕೆ ಕರ್ಣನು ಎಲೈ ದಾನವಾಂತಕ ನಾನು ಕುಲಹೀನನು,ನಿನಗೆ ನಾನು ಸಮಾನನಲ್ಲ ಎಂದು ಕೈ ಮುಗಿದು ಹೇಳುತ್ತಾನೆ.ಕರ್ಣನ ಮಾತಿಗೆ ಕೃಷ್ಣನು ಎಲೈ ಮರ್ಯಾದಾವಂತನೆ ನೀನು ನಮ್ಮೆಲ್ಲರ ಹವಣು.ಸೂರ್ಯವಂಶ ಶ್ರೇಷ್ಠ, ಶ್ರೀರಾಮನಿಗೆ ನೀನು ಸಮನೆಂದು ಹೇಳುತ್ತಾನೆ,ಅಲ್ಲದೆ ಕರ್ಣನ ಕೈಗಳಲ್ಲಿ ಕೈಯಿಟ್ಟು ನಿನ್ನ ಕುಲವನರಿಯದೆ ವೃಥಾ ದುರ್ಯೋಧನನಲ್ಲಿ ಸೇವಕನಾಗಿರುವುದು ಉಚಿತವಲ್ಲ,ಕುಂತಿ ಪಡೆದ ಐದು ಮಂತ್ರಗಳಲ್ಲಿ ಮೊದಲು ನೀನು ಅನಂತರ ಧರ್ಮರಾಯ, ಭೀಮ ಅರ್ಜುನ,ಐದನೆಯ ಮಂತ್ರದಲ್ಲಿ ಮಾದ್ರಿಯಿಂದ ನಕುಲ ಸಹದೇವರು ಹುಟ್ಟಿದರು ಆದ್ದರಿಂದ ಪಾಂಡವರಲ್ಲಿ ನೀನೇ ಮೊದಲಿಗ.

ಪಾಂಡವರೈವರನ್ನು ನಿನ್ನ ಪಾದಗಳಿಗೆ ಕೆಡಹುವೆನು,ನನ್ನ ಸಂಗಡ ಬಾ,ನಿನ್ನನ್ನು ಹಸ್ತಿನಾಪುರದ ಚಕ್ರವರ್ತಿಯನ್ನಾಗಿ ಮಾಡುತ್ತೇನೆ, ಪಾಂಡವರು ಕೌರವರು ನಿನ್ನ ಓಲೈಸುತ್ತಾರೆ ಆದ್ದರಿಂದ ನೀನು ದುಯೋರ್ಧನನ ಮುಂದೆ ಕೈಚಾಚಿ ನಿಲ್ಲಬೇಕಿಲ್ಲ,ನೀನು ನನ್ನ ಮಾತಿಗೆ ಒಪ್ಪಿಕೊಂಡರೆ ರಾಜನಾಗಿ ಮೆರೆಯಬಹುದು. ನಿನ್ನ ಎಡಗಡೆ ಕೌರವರು,ಬಲಗಡೆ ಪಾಂಡವರು,ಎದುರಿನಲ್ಲಿ ಮಾದ್ರ, ಮಾಗಧ, ಯಾದ ವಾದಿಗಳು ಇವರೆಲ್ಲರ ನಡುವೆ ನೀನು ಕುಳಿತು ಓಲಗ ನಡೆಸಬಹುದು,ಇದನ್ನು ಬಿಟ್ಟು ಜೀಯ, ಹಸಾದ ಎಂದು ದುರ್ಯೋಧನನನ್ನು ಓಲೈಸುವುದು ನಿನಗೆ ಬಹಳ ಕಷ್ಟ.ನಿನ್ನ ಶೌರ್ಯಕ್ಕೆ ಸರಿಸಾಟಿಯಾದ ಎದುರಾಳಿಗಳು ಯಾರೂ ಇಲ್ಲ, ಸೂರ್ಯಪುತ್ರನಾದ ನಿನಗೆ ಪಾಂಡವರೈವರು ಬೆನ್ನಿನಲ್ಲಿರುವವವರು,ಹೀಗಾಗಿನಿನಗೆ ಶತ್ರುಗಳು ಯಾರೂ ಇಲ್ಲ ಆದ್ದರಿಂದ ನನ್ನ ಮಾತು ಕೇಳಿ ನಡೆ,ರಾಜನಾಗಿ ಆಡಳಿತ ನಿರ್ವಹಿಸು,ನೀನು ರಾಜನಾದರೆ ಈ ಪಾಂಡವರ ಮತ್ತು ಕೌರವರ ನಡುವೆ ವೈರವೆ ಇರುವುದಿಲ್ಲ ಎಂದು ಕರ್ಣನ ಜನ್ಮ ರಹಸ್ಯವನ್ನು ಹೇಳಿ ರಾಜ್ಯಾಭಿಷೇಕ ಮಾಡುವ ಮಾತನಾಡುತ್ತಾನೆ, ಅಧಿಕಾರ, ಪದವಿ, ಅಂತಸ್ತು, ಐಶ್ವರ್ಯ ಕ್ಕಾಗಿ ಮನುಷ್ಯತ್ವವನ್ನು ಮಾರಿಕೊಳ್ಳುವಂತ, ಸಂಬಂಧವನ್ನೇ ಕಡಿದುಕೊಳ್ಳುವಂತಹ ಜನರ ನಡುವೆ ಕರ್ಣ ಭಿನ್ನನಾಗಿ ಕಾಣಿಸಿಕೊಳ್ಳುತ್ತಾನೆ.

ಕೃಷ್ಣನಾಡಿದ ಮಾತುಗಳನ್ನು ಕೇಳಿ ಕರ್ಣನಿಗೆ ಸಂತೋಷದ ಬದಲು ದುಃಖವಾಗುತ್ತದೆ. ದುರ್ಯೋಧನನಿಗೆ ಕೇಡಾಗುತ್ತದಲ್ಲ ಎಂದು ಮನದಲ್ಲಿ ಸಂಕಟಪಡುತ್ತಾನೆ.ಕೃಷ್ಣ ತನ್ನ ಕುಲದ ರಹಸ್ಯವನ್ನು ಹೇಳಿ ನಿಜವಾಗಿಯೂ ತನ್ನನ್ನು ಕೊಂದುಹಾಕಿದ.ಕೃಷ್ಣನ ಹಗೆತನ

ಕೇವಲ ಹೊಗೆಯಾಗಿ ಉಳಿಯದೆ ಬೆಂಕಿಯಾಗಿ ಹೊತ್ತಿಕೊಂಡು ಸುಡದೆಬಿಡುವುದೇ,ಮಾತಿನಿಂದ ಏನೂ ಪ್ರಯೋಜನವಿಲ್ಲ.ಪಾಂಡುಸುತರೊಡನೆ ಯುದ್ಧ ಸಾಧ್ಯವಿಲ್ಲ ಕಾರಣ ಅವರು ಸಹೋದರರು,ಯುದ್ಧ ಮಾಡಿ ಕೊಲ್ಲದೆಬಿಟ್ಟರೆ ಅವರು ಕೌರವರನ್ನು ಉಳಿಸುವುದಿಲ್ಲವೆಂದು ದುಃಖದಿಂದ ಮರು ಮಾತನಾಡದೇ ಮೌನಕ್ಕೆ ಜಾರುತ್ತಾನೆ,ಇವನ ಮೌನವನ್ನು ಗಮನಿಸಿದ ಕೃಷ್ಣ ನು ಕರ್ಣ,ನಿನ್ನ ಕೇಡನ್ನು ಬಯಸುವನಲ್ಲ, ಮನಸ್ಸಿನ ಚಿಂತೆ ಯಾವುದು? ಕುಂತಿಪುತ್ರರ ಜೊತೆ ಇರುವುದು ನಿನಗೆ ಒಪ್ಪಿಗೆಯಾಗುವುದಿಲ್ಲವೇ?ಹೇಳು ಎಂದು ಒತ್ತಾಯಿಸಿದ.ಆಗ ಕರ್ಣನು

ಮರಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ.

ನಾನು ರಾಜ್ಯದ ಸಿರಿಗೆ ಸೋಲುವವನಲ್ಲ, ಪಾಂಡವರು ಮತ್ತು ಕೌರವರೆನಗೆ ಬೆಸಕೈವಲ್ಲಿ ಮನವಿಲ್ಲ, ನನಗೆ ಆಶ್ರಯ ಕೊಟ್ಟ ಧಣಿಗೆ ಶತ್ರುಗಳ ಶಿರವನ್ನು ಕತ್ತರಿಸಿ ತಂದೊಪ್ಪಿಸುವ ಉತ್ಸಾಹದಲ್ಲಿದ್ದವನು ನಾನು.
ಜನ್ಮ ರಹಸ್ಯವನ್ನು ಹೇಳುವುದರ ಮೂಲಕ ದುರ್ಯೋಧನನನ್ನು ಕೊಂದೆ ನನ್ನನ್ನು ಒತ್ತಾಯಿಸದೆ ಇಲ್ಲಿಂದ ಹೊರಟು ಹೋಗು ಎಂದು ಹೇಳುತ್ತಾನೆ. ಕರ್ಣನಾಡಿದ ಈ ಮಾತುಗಳಲ್ಲಿ ಒಡೆಯನಾದ ದುರ್ಯೋಧನನ ಬಗ್ಗೆ ಇರುವ ಸ್ನೇಹ,ಪ್ರೀತಿ,ವಿಶ್ವಾಸ ಮತ್ತು ಸ್ವಾಮಿನಿಷ್ಠೆ ವ್ಯಕ್ತವಾಗುತ್ತದೆ. ರಾಜ್ಯದ ಪದವಿಗಿಂತ ಮಿತ್ರನಾದ ದುರ್ಯೋಧನನ ಸೇವಕನಾಗಿರುವುದೇ ಉತ್ತಮ ಎಂಬುದು ಕರ್ಣನ ಅಭಿಮತ.
ಕೃಷ್ಣ ನಿನ್ನ ಜೊತೆ ನಾನು ಬರುವುದಿಲ್ಲ,ನನ್ನ ಒಡೆಯನಿಗೋಸ್ಕರ ಕಾದಾಡುತ್ತೇನೆ,ಪಾಂಡವರನ್ನು ನೀನು ರಕ್ಷಿಸಿಕೊ ಎಂದು ನೇರವಾಗಿಯೇ ಹೇಳಿದನು. ಈ ಭೂಮಿಯಲ್ಲಿ ತನಗೆ ದುರ್ಯೋಧನನಿಗಿಂತ ಮಿಗಿಲಾದ, ಆಪ್ತರಾದವರು ಬೇರೆ ಯಾರೂ ಇಲ್ಲ, ನನ್ನನ್ನು ಆತ್ಮೀಯತೆಯಿಂದ ಪೋಷಿಸಿದ,ಗೌರವದಿಂದ ಕಾಣುವ ಮಿತ್ರ, ಸ್ವಾಮಿಯಾದ ದುರ್ಯೋಧನನು ನನ್ನನ್ನು ಎಂದೂ ಕೂಡ ಹೀನವಾಗಿ ನಡೆಸಿಕೊಂಡಿಲ್ಲ. ಅವನನ್ನು ಮರೆಯುವುದು ಮತ್ತು ಬಿಟ್ಟು ಬರುವುದಾದರೂ ಹೇಗೆ? ಎಂದ.

ವೀರ ಕೌರವರಾಯನೇ ದಾ
ತಾರನಾತನ ಹಗೆಯ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರು ನೃಪತಿ
ಶೌರಿ ಕೇಳೈ ನಾಳೆ ಸಮರದ
ಸಾರದಲಿ ತೋರುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ

- ವೀರನಾದ ದುರ್ಯೋಧನ ನನ್ನ ಪೊರೆದ ದಾತಾರ. ಆತನ ಶತ್ರು ನನಗೂ ಶತ್ರುಗಳೇ. ಆತನನನ್ನು ಬಿಟ್ಟು ಉಳಿಯುವುದನ್ನು ಯಾರೂ ಮೆಚ್ಚುವುದಿಲ್ಲ. ಅತಿಯಾದ ಮನ್ನಣೆ, ಪ್ರೀತಿಯನ್ನು ತೋರಿದ ಕೌರವೇಂದ್ರನನ್ನು ಬಿಟ್ಟು, ಬರುವುದಾದರೂ ಹೇಗೆ? ನಾಳೆಯ ಸಮರದಲ್ಲಿ ನನ್ನ ಭುಜಬಲದ ಪ್ರದರ್ಶನವವನ್ನು ಪಾಂಡವರ ಎದುರಿನಲ್ಲಿ ತೋರುವೆನು ಎನ್ನುತ್ತಾನೆ. ನಮ್ಮಿಬ್ಬರ ಸ್ನೇಹ ಎಷ್ಟೊಂದು ಗಾಢವಾದದ್ದೆಂದರೆ ಆತ ತನಗೆ ತೋರುವ ಆದರ ಪ್ರೀತಿಗೆ ಎಣೆಯೇ ಇಲ್ಲ ಎನ್ನುತ್ತಾನೆ.

ನೋಡಿ ದಣಿಯನು ಬಿರುದ ಹೊಗಳಿಸಿ
ಹಾಡಿ ದಣಿಯನು ನಿಚ್ಚಲುಚಿತವ
ಮಾಡಿ ತಣಿಯನು ಮಾನನಿಧಿಯನದೆಂತು ಮರೆದಪೆನು
ಕಾಡಲಾಗದು ಕೃಷ್ಣ ಖಾತಿಯ
ಮಾಡಲಾಗದು ಬಂದೆನಾದೊಡೆ
ರೂಢಿ ಮೆಚ್ಚದು ಕೌರವ ಹಗೆ ಹರಿಬತನಗೆಂದ.

- ಎನ್ನುವಲ್ಲಿ ಕರ್ಣನು ದುರ್ಯೋಧನ ತನ್ನನ್ನು ನಡೆಸಿಕೊಂಡು ಬಂದ ಬಗೆಯನ್ನು ಕೃಷ್ಣನಿಗೆ ಮನವರಿಕೆ ಮಾಡಿಕೊಡುತ್ತಾನೆ. ತನ್ನನ್ನು ಎಲ್ಲರಿಗಿಂತಲೂ ಅಧಿಕವಾಗಿ ಪ್ರೀತಿಯಿಂದ ನಡೆಸಿಕೊಂಡು, ಹೊಗಳಿದರೂ, ನಿತ್ಯವೂ ತನಗೆ ಉಚಿತವಾದುವನ್ನೇ ಮಾಡಿದರೂ ಅವನಿಗೆ ತೃಪ್ತಿಯಿಲ್ಲ. ಮಾನನಿಧಿಯಾದ ಆತನನ್ನು ಮರೆಯುವುದಾದರೂ ಹೇಗೆ ಎಂದು ಕೃಷ್ಣನನ್ನು ಪ್ರಶ್ನಿಸಿ ಕೋಪಿಸಿಕೊಳ್ಳಬೇಡ ಕೃಷ್ಣ ನಿನ್ನ ಆಮಿಷದ ಮಾತುಗಳಿಗೆ ಕಟ್ಟುಬಿದ್ದು ನಿನ್ನ ಜೊತೆ ನಾ ಬಂದರೆ ಲೋಕ ಮೆಚ್ಚುವುದಿಲ್ಲ. ದುರ್ಯೋಧನನ ಶತ್ರುಗಳನ್ನು ಸಂಹರಿಸುವುದೇ ನನ್ನ ಕರ್ತವ್ಯ. ಆ ಮೂಲಕ ಒಡೆಯನ ಋಣವನ್ನು ಸಂದಾಯ ಮಾಡುತ್ತೇನೆ ಎನ್ನುತ್ತಾನೆ.
ಕರ್ಣನು ದುರ್ಯೋಧನನ ಬಗ್ಗೆ ಇಟ್ಟುಕೊಂಡಿರುವ ಸ್ವಾಮಿನಿಷ್ಠೆಯನ್ನು ಹಾಗೆಯೇ ಆತನ ದೃಢ ನಿರ್ಧಾರಕ್ಕೆ ಕೃಷ್ಣ ಮನದಲ್ಲಿಯೇ ಸಂತಸ ಪಡುತ್ತಾನೆ. ರಾಜ್ಯವನ್ನು ಕೌರವನಿಂದ ನಿನ್ನ ತಮ್ಮಂದಿರಿಗೆ ಕೊಡಿಸುವುದು ಸೂಕ್ತ ಎಂದರೂ ಕೂಡ ಕರ್ಣನು ಒಪ್ಪದೇ ವೈರ ಪ್ರಬಲವಾದ ಈ ಹಂತದಲ್ಲಿ ಸಂಧಿ ಸಾಧ್ಯವಾಗದು ಎಂದು ಹೇಳಿ ಕೊನೆವರೆಗೂ ಸ್ವಾಮಿ ನಿಷ್ಠೆಯನ್ನು ಕಾಯ್ದುಕೊಂಡು ಕುರುಕ್ಷೇತ್ರದಲ್ಲಿ ಹೋರಾಡುತ್ತಲೇ ಅರ್ಜುನನ ಬಾಣಕ್ಕೆ ಗುರಿಯಾಗಿ ಅಸುನೀಗಿದ. ಹೀಗೆ ಕರ್ಣ ತನ್ನ ತ್ಯಾಗ, ಸತ್ಯ ಮತ್ತು ಸ್ವಾಮಿನಿಷ್ಠೆಯಿಂದ ಹೆಸರುವಾಸಿಯಾಗಿದ್ದಾನೆ.
ಮನಸ್ಸು ಮಾಡಿದ್ದರೆ ಕರ್ಣ ಹಸ್ತಿನಾಪುರದ ಚಕ್ರವರ್ತಿಯಾಗಿ ಮೆರೆಯಬಹುದಿತ್ತು ಆದರೆ ಯಾವುದಕ್ಕೂ ಆಸೆ ಪಡದೆ ಕೊನೆಯವರೆಗೂ ತನ್ನ ಒಡೆಯನಾದ ದುರ್ಯೋಧನನಿಗೆ ನಿಷ್ಠನಾಗಿದ್ದು ಅಂತಿಮವಾಗಿ ತನ್ನ ಪ್ರಾಣವನ್ನೇ ಅರ್ಪಿಸುತ್ತಾನೆ.
ಕೃಷ್ಣನಿಂದ ತನ್ನ ಹುಟ್ಟಿನ ಗುಟ್ಟನ್ನು ತಿಳಿದ ಕರ್ಣ ಸಂತಸ ಪಡುವುದಕ್ಕಿಂತ ಆತಂಕಗೊಳ್ಳುತ್ತಾನೆ. ಏಕೆಂದರೆ ಹುಟ್ಟಿನ ಕಳಂಕವನ್ನು ದುರ್ಯೋಧನ ನೀಗಿಸಿ ಅಂಗ ರಾಜ್ಯದ ದೊರೆಯಾಗಿ ಮಾಡಿದ್ದ ಹಾಗಾಗಿ ಅದು ಕರ್ಣನಿಗೆ ಸಮಸ್ಯೆಯಾಗಿ ಉಳಿದಿಲ್ಲ.
ಸತ್ಯಂತಪ ಮುನಿಯಿಂದ ಕರ್ಣನ ಜನ್ಮ ರಹಸ್ಯ ತಿಳಿದುಕೊಂಡು ದುರ್ಯೋಧನ ಮುಳ್ಳನ್ನು ಮುಳ್ಳಿನಿಂದ ತೆಗೆಯಲು ಕರ್ಣನನ್ನು ಸಾಕಿದ್ದಾನೆಂಬ ವಿಚಾರ ತಿಳಿದೂ ಕೂಡ ಕರ್ಣ ತನ್ನ ನಿಷ್ಠೆಯನ್ನು ಬದಲಾಯಿಸಲಿಲ್ಲ.
ಒಡೆಯನ ಪತ್ನಿಯಾದ ಭಾನುಮತಿಯನ್ನು ಪಗಡೆಯಾಟದಲ್ಲಿ ಸೋಲಿಸಿ ಮುತ್ತಿನಹಾರಕ್ಕೆ ಕೈ ಹಾಕಲಾಗಿ ಅದು ತುಂಡಾಗಿ ಬಿದ್ದಾಗ, ಅಲ್ಲಿಗೆ ಬಂದ ದುರ್ಯೋಧನ ಸಮಚಿತ್ತದಿಂದ ಅದನ್ನು ಆಯ್ದುಕೊಟ್ಟಿದ್ದನ್ನು ಜ್ಞಾಪಿಸಿಕೊಳ್ಳುತ್ತಾನೆ. ಇಂಥ

ಸದ್ಗುಣಶಾಲಿ, ಹೃದಯವಂತ ವಿಶಾಲ ಗುಣದ ಧಣಿಯನ್ನು ಬಿಟ್ಟು ಬರಲು ಒಪ್ಪುವುದೇಯಿಲ್ಲ.

ಕೃಷ್ಣ ಕಣ್ಣು ಇಟ್ಟ ಮೇಲೆ ಯಾರನ್ನುಉಳಿಸುವುದಿಲ್ಲ ಎಂಬ ಸತ್ಯ ತಿಳಿದಿದ್ದರೂ ತನ್ನ ಅಂತರಂಗದ ನಿಷ್ಠೆಯನ್ನು ಬದಲಾಯಿಸದೇ, ತಾನು ನಂಬಿದ ಮೌಲ್ಯಕ್ಕೆ ಎರಡೆಣಿಸದೆ ಕೊನೆಯವರೆಗೂ ಮೌಲ್ಯಗಳನ್ನು ಕಾಯ್ದುಕೊಂಡ ಕರ್ಣ ತನ್ನ ಘನ ವ್ಯಕ್ತಿತ್ವ. ಸದ್ಗುಣಗಳ ಶ್ರೀಮಂತಿಕೆಯಿಂದ, ಸ್ವಾಮಿನಿಷ್ಠೆಯಿಂದ ಶ್ರೇಷ್ಟತೆ ಮತ್ತು ಜೇಷ್ಟತೆಯಿಂದ ಅಜರಾಮನಾಗಿರುವ ಹಾಗೆ ಕುಮಾರವ್ಯಾಸ ಚಿತ್ರಿಸಿದ್ದಾನೆ.

ಪರಾಮರ್ಶನ ಕೃತಿಗಳು.


1. ಕುಮಾರವ್ಯಾಸ ಭಾರತ ಕಥಾ ಮಿತ್ರ - ಅ.ರಾ.ಮಿತ್ರ - ಪ್ರಕಾಶಕರು: ಡಿ ವೀರೇಂದ್ರ ಹೆಗ್ಗಡೆ ಶ್ರೀಕ್ಷೇತ್ರ ಧರ್ಮಸ್ಥಳ, 2010.
2. ಕುಮಾರವ್ಯಾಸ ಭಾರತ ಕಥಾಮೃತ- ಎಲ್. ಆರ್ ಭಟ್ - ಶ್ರೀ ಭಗವತ್ಪಾದ ಪ್ರಕಾಶನ, ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠದೇವಳ ಶಿರಸಿ, 2007.
3. ಕುಮಾರವ್ಯಾಸ ಭಾರತದ ಆಯ್ದ ಪ್ರಸಂಗಗಳು - ಕೆ.ಆರ್.ಕೃಷ್ಣಯ್ಯ, ಛಾಯಾ ಸಾಹಿತ್ಯ ಪ್ರಕಾಶನ ಬೆಂಗಳೂರು, 2016.
4. ಕನ್ನಡ ಸಾಹಿತ್ಯ ಕೋಶ - ರಾಜಪ್ಪ ದಳವಾಯಿ, ದಳವಾಯಿ ಪ್ರಕಾಶನ ಬೆಂಗಳೂರು, 2008.
5. ಬೇರು ಬಳ್ಳಿ - ಅಭಯ್ ಕುಮಾರ್, ಪ್ರಸಾರಾಂಗ ಮಂಗಳೂರು ವಿವಿ, ಮಂಗಳಗಂಗೋತ್ರಿ, 2013.
6. ಸಾಹಿತ್ಯ ಸೌರಭ - 3 - ಶಿವಾನಂದ ಕೆಳಗಿನಮನಿ, ಪ್ರಕಾಶಕರು ಕುವೆಂಪು ವಿವಿ ಪದವಿ ಕಾಲೇಜು ಕನ್ನಡ ಅಧ್ಯಾಪಕರ ವೇದಿಕೆ ಶಂಕರಘಟ್ಟ, 2025.
7. ವಿಜ್ಞಾನ ಗಂಗೋತ್ರಿ – 4 - ಸೋಮಣ್ಣ ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ ಮಂಗಳ ಗಂಗೋತ್ರಿ, 2022.
8. ಪ್ರಾಚೀನ ಕನ್ನಡ ಕಾವ್ಯ ಭಾಗಗಳು -ರಾಮೇಗೌಡ, ಕೆಎಸ್ ಒಯು, ಮಾನಸ ಗಂಗೋತ್ರಿ ಮೈಸೂರು, 2001.


**Creative Commons (CC) License**
This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.